ಪ್ರಥಮ ದರ್ಜೆ ನ್ಯಾಯಿಕಾಧಿಕಾರಿಗಳ ನ್ಯಾಯಾಲಯ, ಗೌರಿಬಿದನೂರು

ಸಿ ಸಿ ನಂ. **824/2017**

ದಿಃ **27-02-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

| | | | |
|---|---|---|---|
| ಹೆಸರು | ನಂಜುಂಡಪ್ಪ | ಸಿ.ಡಬ್ಲ್ಯೂ | **04** |
| ವಯಸ್ಸು | 64 ವರ್ಷ | ಪಿ.ಡಬ್ಲ್ಯು: | **05** |
| ತಂದೆಯ ಹೆಸರು | ಕದೀರಪ್ಪ | | |
| ವೃತ್ತಿ | ಸಮಾಜ ಸೇವೆ | | |
| ವಾಸಸ್ಥಳ | ಹುದುಗೂರು ಗ್ರಾಮ<br>ಗೌರಿಬಿದನೂರು ತಾಲ್ಲೂಕು | | |

ಮುಖ್ಯ ವಿಚಾರಣೆಃಃ ಶ್ರೀ ಸರ್ಕಾರಿ ಅಭಿಯೋಜಕರಿಂದಃ

ಸಾಕ್ಷಿಯು ನಿಪಿ-7 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-7 ಸಿ ಎಂದು ಗುರುತಿಸಲಾಯಿತು. ನನಗೆ ಈ ಪ್ರಕರಣದ ವಿಚಾರಗಳು ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಕೈಗೊಂಡಿರುವುದಿಲ್ಲ. ನಿಪಿ-7 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ನನಗೆ ಈ ಪ್ರಕರಣದ ವಿಚಾರಗಳು ಗೊತ್ತಿಲ್ಲ.

**(**ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು**.)**

ದಿನಾಂಕ 26-10-2016 ರಂದು ನಾನು ಮತ್ತು ಚಾ.ಸಾ 3 ರವರು ಹಾಗೂ ಚಾ.ಸಾ 5 ರವರು ಗೌರಿಬಿದನೂರು ನಗರದ ಉಪ್ಪಾರ ಕಾಲೋನಿ ಮಾರುತಿ ನಗರದ ಆಂಜನೇಯ ಸ್ವಾಮಿ ದೇವಸ್ಥಾನದ ಮುಂದಿನ ಗೌರಿಬಿದನೂರು-ಮಧುಗಿರಿ ರಸ್ತೆಯಲ್ಲಿ ನಿಂತಿದ್ದಾಗ ಪೊಲೀಸರು ಬಂದು ಪ್ರಕರಣದ ವಿಚಾರಗಳನ್ನು ತಿಳಿಸಿ ಪಂಚನಾಮೆಯ ಸಮಯದಲ್ಲಿ ಸಾಕ್ಷಿಗಳಾಗಿ ಸಹಕರಿಸಲು ನಮ್ಮನ್ನು ಕೇಳಿಕೊಂಡರು ಎಂದರೆ ಸರಿಯಲ್ಲ. ನಾವು ಸಾಕ್ಷಿಗಳಾಗಿ ಸಹಕರಿಸಲು ಒಪ್ಪಿಕೊಂಡ ನಂತರ ಸದರಿ ಸ್ಥಳದಲ್ಲಿ ಬೆಳಗ್ಗೆ 11.00 ಗಂಟೆಯಿಂದ 12.00 ಗಂಟೆಯವರೆಗೆ ನಿಪಿ-7 ರ ಪಂಚನಾಮೆಯನ್ನು ಕೈಗೊಂಡು ಸ್ಥಳದಲ್ಲಿಯೇ ಚಾ.ಸಾ 3, ಚಾ.ಸಾ 5 ಹಾಗೂ ನನ್ನ ಸಹಿಗಳನ್ನು ಪಡೆದುಕೊಂಡರು ಎಂದರೆ

ಸರಿಯಲ್ಲ. ಸದರಿ ಸ್ಥಳದಲ್ಲಿ ಅಪಘಾತದಿಂದಾಗಿ ಸುಮಾರು 3 ಅಡಿ ಉದ್ದ ರಕ್ತ ಕಲೆ ಆಗಿರುತ್ತದೆ ಎಂದರೆ ಸರಿಯಲ್ಲ. ನಮ್ಮ ಸಮಕ್ಷಮ ಎಪಿ 21 ಎಕ್ಸ್ 2038 ನೋಂದಣಿಯ ಟಾಟಾ ಕಂಪನಿಯ 10 ಚಕ್ರಗಳ ಲಾರಿ ಹಾಗೂ ಕೆಎ 06 ಇಎಫ್ 7805 ನೋಂದಣಿಯ ಹಿರೋ ಹೊಂಡಾ ಸ್ಲೇಂಡರ್ ಪ್ಲಸ್ ದ್ವಿಚಕ್ರ ವಾಹನವನ್ನು ಮುಂದಿನ ತನಿಖೆಗಾಗಿ ವಶಪಡಿಸಿಕೊಂಡರು ಎಂದರೆ ಸರಿಯಲ್ಲ. ಆರೋಪಿಗಳು ನನಗೆ ಪರಿಚಯವಿರುವ ಕಾರಣ ಅವರಿಗೆ ಸಹಾಯ ಮಾಡಲು ಮತ್ತು ಈ ಪ್ರಕರಣವನ್ನು ಖುಲಾಸೆಗೊಳಿಸಲು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಆರೋಪಿ ಪರ ವಕೀಲರಾದ ಶ್ರೀ ಬಿ.ಎಲ್ ರವರಿಂದ ಇರುವುದಿಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-
ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು